**ಓಎಸ್ ನಂಃ 289/2022      ಪಿ.ಡಬ್ಲ್ಯೂ- 3**

**ದಿನಾಂಕಃ 25.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ. ಎನ್.ಎಂ.ಎಸ್. ವಕೀಲರಿಂದಃ

ನಿಮಗೆ ಅಂಗ್ರೇಜಿ ಓದಲು ಬರುತ್ತದಾ ಎಂದರೆ ಇಲ್ಲ ಕನ್ನಡ ಬರುತ್ತದೆ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ವಿಚಾರ ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನೀವು ವಾಸಿಸುವುದು ಗೊಲ್ಲಹಳ್ಳಿಯಲ್ಲಿ ಎಂದರೆ ಹೌದು ಎನ್ನುತ್ತಾರೆ. ನೀವು ಮುರುಗಮಲ್ಲ ಗ್ರಾಮದಲ್ಲಿ ಇಲ್ಲ ಗೊಲ್ಲಹಳ್ಳಿಯಲ್ಲಿ ಇರುತ್ತೀರಿ ಎಂದರೆ ಹೌದು ಎನ್ನುತ್ತಾರೆ. ರೆಡ್ಡಿಕೃಷ್ಣ ಯಾವ ರೀತಿ ಸಂಬಂಧ ಎಂದರೆ ಸಾಕ್ಷಿ ಸಂಬಂಧಿ ಇಲ್ಲ ಪಕ್ಕದ ಜಮೀನಿನವರು ಎನ್ನುತ್ತಾರೆ. ರೆಡ್ಡಿಕೃಷ್ಣ ರವರ ಮಗಳನ್ನು ನಿಮ್ಮ ಅಣ್ಣನ ಮಗ ಮದುವೆ ಆಗಿರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿ ಸ.ನಂ. ಎಷ್ಟು ಎಂದರೆ **42, 36** ವಿಸ್ತೀರ್ಣ ಇರುತ್ತದೆ. ವಾದಿ ದಾವಾ ಅಸ್ತಿಯ ಮಾಲೀಕರು ಎಂದು ಹೇಳುವುದಕ್ಕೆ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಲಕ್ಷ್ಮಮ್ಮ ದಾವಾ ಅಸ್ತಿಯನ್ನು ಯಾವಾಗ ಖರೀದಿ ಮಾಡಿರುತ್ತಾರೆ ಮತ್ತು ಅದರ ಕ್ರಯಪತ್ರ ನೋಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿ ವಾದಿಗೆ ತೊಂದರೆ ಕೊಟ್ಟಿರುವ ಬಗ್ಗೆ ನೀವು ನೋಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ನೀವು ರೆಡ್ಡಿಕೃಷ್ಣ ರವರ ಸಂಬಂಧಿಕರು ಆದ್ದರಿಂದ ಅವರು ನಿಮ್ಮನ್ನು ಕರೆದುಕೊಂಡು ಬಂದು ಸುಳ್ಳು ಹೇಳಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.